ಓ.ಎಸ್.ನಂಃ 166/2020
ಪಿಡಬ್ಲ್ಯೂ-1

**<u>ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 05.07.2025 ರಂದು ಪ್ರಮಾಣಿಕರಿಸಲಾಯಿತು.</u>**
**<u>ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎ.ಸಿ.ಎಸ್. ವಕೀಲರಿಂದಃ</u>**

ಪ್ರತಿವಾದಿಗಳು ನಂಜನಗೂಡು ತಾಲ್ಲೂಕಿನ ಕಂದೇಗಾಲದವರು ಎಂದರೆ ಸರಿ. ತಹಶೀಲ್ದಾರ್ ನ್ಯಾಯಾಲಯದಲ್ಲಿ ಪ್ರತಿವಾದಿಗಳು ಕಂದೇಗಾಲದವರು ಎಂದು ನನಗೆ ಗೊತ್ತಾಗಿದೆ. ಪ್ರತಿವಾದಿಗಳು ಮೂಲತಃ ನಂಜನಗೂಡು ತಾಲ್ಲೂಕಿನ ಸಿದ್ದಯ್ಯನಹುಂಡಿ ಗ್ರಾಮದವರು ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆಯ ಹೆಸರು ಕಾಳೇಗೌಡ ಮತ್ತು ಅವರ ತಮ್ಮನ ಹೆಸರು ಸಣ್ಣೇಗೌಡ ಎಂದರೆ ಸರಿಯಲ್ಲ. ಕಾಳೇಗೌಡರವರು ಕಂದೇಗಾಲ ಗ್ರಾಮಕ್ಕೆ ವಲಸೆ ಹೋದರು ಮತ್ತು ಅವರ ತಮ್ಮ ಶ್ರೀಕಂಠಪುರ ಗ್ರಾಮಕ್ಕೆ ವಲಸೆ ಹೋದರು ಎಂದರೆ ಸರಿಯಲ್ಲ. ರಾಮೇಗೌಡ ಬಿನ್ ಲಿಂಗೇಗೌಡರವರು ನನ್ನ ಅಣ್ಣ ಎಂದರೆ ಸರಿ. ಸರ್ವೇ ನಂಃ 376/ಪಿ5 ರಲ್ಲಿ 4 ಎಕರೆ ನಿಂಗೇಗೌಡ ಬಿನ್ ರಾಮೇಗೌಡರವರಿಗೆ ಮಂಜೂರಾಗಿತ್ತು. ನನ್ನ ತಾತನ ಹೆಸರು ಬಿರೇಗೌಡ @ ಲಿಂಗೇಗೌಡ. ರಾಮೇಗೌಡರವರಿಗೆ 7 ಜನ ಮಕ್ಕಳು ಇದ್ದರು ಎಂದರೆ ಸಾಕ್ಷಿ ಇಬ್ಬರು ಮಕ್ಕಳು ಇದ್ದರು ಎಂದು ನುಡಿಯುತ್ತಾರೆ.

ರಮೇಗೌಡ ರವರಿಗೆ 1.ಕಾಳಮ್ಮ, 2.ಸಿದ್ದೇಗೌಡ @ ಕಿವುಡ, 3.ದೊಡ್ಡನಿಂಗೇಗೌಡ, 4.ಬುಡಕಮ್ಮ, 5.ಚಿಕ್ಕನಿಂಗೇಗೌಡ ಮತ್ತು 6.ಸಿದ್ದಮ್ಮ ಎಂಬ 6 ಜನ ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಕಾಳಮ್ಮರವರಿಗೆ ಚಿಕ್ಕಕಾಳಮ್ಮ ಎಂಬ ಮಗಳು ಇದ್ದರು ಎಂದರೆ ಸರಿಯಲ್ಲ. ಸದರಿ ಚಿಕ್ಕಕಾಳಮ್ಮರವರನ್ನು ಪ್ರತಿವಾದಿಗಳ ಚಿಕ್ಕಪ್ಪ ಸಣ್ಣೇಗೌಡ ವಿವಾಹವಾಗಿದ್ದರು ಎಂದರೆ, ಸಾಕ್ಷಿ ಮುಂದುವರೆದು ಸಣ್ಣೇಗೌಡರವರ ಹೆಂಡತಿ ಚಿಕ್ಕಕಾಳಮ್ಮ ಎಂದು ನುಡಿಯುತ್ತಾರೆ. ಸದರಿ ಚಿಕ್ಕಕಾಳಮ್ಮ ಮತ್ತು ಸಣ್ಣೇಗೌಡರವರಿಗೆ ಮೊದಲು ಮಕ್ಕಳು ಇದ್ದರು, ಈಗ ಅವರು ಮೃತರಾಗಿರುತ್ತಾರೆ. ಪ್ರತಿವಾದಿಗಳ ಚಿಕ್ಕಪ್ಪ ಸಣ್ಣೇಗೌಡನಿಗೆ ವಾದಿಗಳ ತಂದೆ ಸಬಂಧದಲ್ಲಿ ಭಾವನಾಗಬೇಕು ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಗುಂಡ್ಲುಪೇಟೆ